MVC 645/2022
PW.1 (ಜವರೇಗೌಡ)

ದಿನಾಂಕಃ **09-03-2023**

ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಬಿ.ಆರ್. ವಕೀಲರಿಂದಃ–**

ನಾನು ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಹಾಜರುಪಡಿಸಿರುವ ಅಪರಾಧ ಸಂಖ್ಯೆ 292/2021 ರಲ್ಲಿಯ ಪ್ರಥಮ ವರ್ತಮಾನ ವರದಿ, ದೂರು, ಸ್ಥಳ ಮಹಜರು, ಸ್ಥಳ ನಕ್ಷೆ, ಮೋಟಾರು ವಾಹನ ಪರಿಶೀಲನಾ ವರದಿ, ಗಾಯದ ಪ್ರಮಾಣ ಪತ್ರ ಹಾಗೂ ಅಂತಿಮ ವರದಿ ಇವುಗಳ ಪ್ರತಿಗಳನ್ನು ಕ್ರಮವಾಗಿ ನಿಪಿ.1 ರಿಂದ 7 ಎಂದು ಗುರುತಿಸಲಾಯಿತು.

ನನ್ನ ಆಧಾರ್ ಗುರುತಿನ ಚೀಟಿಯ ನಕಲನ್ನು ನಿ.ಪಿ.8 ಎಂದು ಗುರುತಿಸಲಾಯಿತು. ಒಟ್ಟು 3 ವೈದ್ಯಕೀಯ ಸಲಹಾ ಚೀಟಿಗಳನ್ನು ನಿ.ಪಿ.9 ಎಂದು, ಒಟ್ಟು 13 ರಶೀತಿಗಳನ್ನು ನಿ.ಪಿ.10 ಎಂದು, ಡಿಸ್ಚಾರ್ಜ್ ಸಮರಿಯನ್ನು ನಿ.ಪಿ.11 ಎಂದು, ಹೊರರೋಗಿ ಚಿಕಿತ್ಸಾ ಚೀಟಿಯನ್ನು ನಿ.ಪಿ.12 ಎಂದು ಗುರುತಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು**.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.